**CC No.62/2023 DW-1**

**ದಿನಾಂಕಃ 01-08-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಮುಂದುವರೆದ ಮುಖ್ಯ ವಿಚಾರಣೆ ಃ ಆರೋಪಿ ಪರ ವಕೀಲರಿಂದ**

ನಾನು ನನ್ನ ಎಸ್ ಬಿ ಐ ಬ್ಯಾಂಕಿನ ಅಕೌಂಟ ಸ್ಟೇಟಮೆಂಟ್ ಇದರ ದೃಡಿಕೃತ ನಕಲನ್ನು ಹಾಜರು ಪಡಿಸಿರುತ್ತೇನೆ ಅದನ್ನು ನಿಡಿ-1 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಪಿರ್ಯಾದುದಾರರ ಪರ ವಕೀಲರು ಸಮಯಾವಕಾಶ ಕೋರಿದ್ದು, ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ರಾಜೀವ ಗೋಳಸಾರ)
ಪ್ರ.ದಿ.&ನ್ಯಾದಂ., ಗೋಕಾಕ.

**CC No.62/2023 DW-1**

**CC No.2365/2016, PW-1**

**ಅಪರಾಧ ಪ್ರಕ್ರಿಯಾ ಸಂಹಿತೆಯ ಕಲಂ.311ರ ಮೇಲೆ ಆದ ಆದೇಶದ ಮೇರೆಗೆ ದಿನಾಂಕಃ 14-03-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. ಮುಂದುವರೆದ ಮುಖ್ಯ ವಿಚಾರಣೆಃ ಪಿರ್ಯಾದುದಾರರ ಪರ ವಕೀಲರಿಂದಃ**

ನನ್ನ ಗುತ್ತಿಗೆ ಕೆಲಸದ ಸಲುವಾಗಿ ಪಡೆದುಕೊಂಡ ಜಿ.ಎಸ್.ಟಿ ಸರ್ಟಿಫಿಕೇಟ್ ಹಾಜರುಪಡಿಸಿದ್ದು ಅದನ್ನು ನಿಪಿ-7 ಎಂದು, ನನ್ನ ವ್ಯಾಟ್ ಪ್ರಮಾಣ ಪತ್ರದ ಧೃಡೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-8 ಎಂದು, ನಾನು ಪ್ರಥಮ ದರ್ಜೆ ಗುತ್ತಿಗೆದಾರನಾಗಿರುತ್ತಾನೆ ಎಂದು ಲೋಕೋಪಯೋಗಿ ಇಲಾಖೆಯವರು ನೀಡಿರುವ ಗುರುತಿನ ಚೀಟಿ ಹಾಜರುಪಡಿಸಿದ್ದು ಅದನ್ನು ನಿಪಿ-9 ಎಂದು, ನನ್ನ ಬ್ಯಾಂಕ್ ಸ್ಟೇಟಮೆಂಟ್ ಹಾಜರುಪಡಿಸಿದ್ದು ಅದನ್ನು ನಿಪಿ-10 ಎಂದು, ನನ್ನ ಹೆಂಡತಿಯಾದ ಭೀಮವ್ವ ದಂಡಿನರವರು ರೇವಪ್ಪ ಪೂಜಾರಿಯವರಿಗೆ ಜೆ.ಸಿ.ಬಿ ಮಾರಾಟ ಮಾಡಿರುವ ಕುರಿತು ದಾಖಲೆ ಹಾಜರುಪಡಿಸಿದ್ದು ಅದನ್ನು ನಿಪಿ-11 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ**

ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ರಾಜೀವ ಗೋಳಸಾರ)
ಪ್ರ.ದಿ.&ನ್ಯಾದಂ., ಗೋಕಾಕ.

## ಪ್ರಧಾನ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ ಸಾಃಗೋಕಾಕ

ಸಿ.ಸಿ. 2365/2016

ಸಿಡಬ್ಲೂಃ **1**

ಪಾಟೀ ಸವಾಲುಃ ಶ್ರೀ ಸಿ.ಸಿ.ಆರ್ ವಕೀಲರಿಂದ ಆರೋಪಿ ಪರ ;

ನಾನು ಕಾಂಟ್ರ್ಯಾಕ್ಟರ ಮತ್ತು ಜೆ.ಸಿ.ಬಿ ವ್ಯಾಪಾರ ಮಾಡುತ್ತೇನೆ. ಜೆ.ಸಿ.ಬಿ ಕಾಂಟ್ರ್ಯಾಕ್ಟ ಕೆಲಸ ಮಾಡುತ್ತೇನೆ. ನಾನು ಸರ್ಕಾರ ಮತ್ತು ಖಾಸಗಿ ಕಾಂಟ್ರ್ಯಾಕ್ಟ ಕೆಲಸ ಮಾಡುತ್ತೇನೆ. ನನ್ನ ಹತ್ತಿರ ಸ್ಧ್ಯ ಒಂದು ಜೆ.ಸಿ.ಬಿ ಇದೆ, 2016 ರಲ್ಲಿ ಮೂರು ಜೆ.ಸಿ.ಬಿಗಳು ಇದ್ದವು. ಸ್ಧ್ಯ ನನ್ನ ಹತ್ತಿರ ಸ್ವಂತ ಜೆ.ಸಿ.ಬಿಗಳು ಇವೆ. ಸ್ಧ್ಯ ನನ್ನ ಹತ್ತಿರ ಇರುವ ಜೆ.ಸಿ.ಬಿ ನಂ.ಕೆಎ-49-8464. ದೂರನ್ನು ದಾಖಲಿಸಲು ನಾನು ಮಾಹಿತಿ ನೀಡಿದ್ದೇನೆ. ನನಗೆ ಇಂಗ್ಲೀಷ ಅಲ್ಪ ಸ್ವಲ್ಪ ಬರುತ್ತದೆ. ನನ್ನ ಜೆ.ಸಿ.ಬಿಗೆ ಆಯಿಲಿನ ಅವಶ್ಯಕತೆ ಇರುತ್ತದೆ. ಒಂದು ವರ್ಷಕ್ಕೆ ಸುಮಾರು 6 ರಿಂದ 7 ಲಕ್ಷ ಮೌಲ್ಯದ ಆಯಿಲಿನ ಅವಶ್ಯಕತೆ ಇರುತ್ತದೆ.

ಜೆ.ಸಿ.ಬಿಗಳಿಗೆ ಹೈಡ್ರಾಲಿಕ ಮತ್ತು ಇಂಜಿನ ಆಯಿಲ ಅವಶ್ಯಕತೆ ಇರುತ್ತದೆ. ಈ ದೂರಿನಲ್ಲಿ ನಾನು ಡಿಜೈಯಿಲಿನ ಬಗ್ಗೆ ಹೇಳುತ್ತಿಲ್ಲ. ಇಂಜಿನ ಆಯಿಲ 2 ರಿಂದ 3 ತಿಂಗಳಿಗೊಮ್ಮೆ ಬದಲಾಯಿಸಬೇಕಾಗುತ್ತದೆ. ಜೆ.ಸಿ.ಬಿಗೆ 100 ಲೀ ಇಂಜಿನ ಆಯಿಲ ಅವಶ್ಯಕತೆ ಇರುತ್ತದೆ. ಎಷ್ಟು ಬ್ಯಾರಲ್ ಆಯಿಲನ್ನು ಆರ್ಡರ ನೀಡಿರುತ್ತೇನೆ ಎಂದರೆ ನಿಖರವಾದ ಬ್ಯಾರಲ್ ಹೇಳಲು ಬರುವುದಿಲ್ಲ ಆದರೆ ಸಂಪೂರ್ಣವಾಗಿ ಅವಶ್ಯಕತೆ ಇರುವ ಆಯಿಲ್‌ಗಾಗಿ ಆರ್ಡರ ನೀಡಿರುತ್ತೇವೆ.

ಜೆ.ಸಿ.ಬಿಗೆ 50 ಲೀ ಹೈಡ್ರಾಲಿಕ ಆಯಿಲ ಅವಶ್ಯಕತೆ ಇರುತ್ತದೆ. ನಾನು ಗೋಕಾಕನಲ್ಲಿ ಕಾಂಟ್ರ್ಯಾಕ್ಟ ಕೆಲಸ ಮಾಡುತ್ತೇನೆ. ಗೋಕಾಕನಲ್ಲಿ ಆಯಿಲ್ ಪೂರೈಕೆದಾರರು ಯಾರು ಇಲ್ಲವೇ ಎಂದರೆ ಹುಬ್ಬಳ್ಳಿಯಲ್ಲಿ ಕಡಿಮೆ ದರದಲ್ಲಿ ಸಿಗುವ ಕಾರಣದಿಂದ ಅಲ್ಲಿ ಖರೀದಿಸಿರುತ್ತೇವೆ. ಆರೋಪಿಯೊಂದಿಗೆ ನಾನು 2016 ರಲ್ಲಿ 3-4 ಬಾರಿ ವ್ಯವಹಾರ ಮಾಡಿರುತ್ತೇನೆ.

ಮುರುಸಿದ್ದಪ್ಪ ಹಾರೂಗೇರಿ ಎಂಬ ವಕೀಲರು ನನಗೆ ಆರೋಪಿತನ ಪರಿಚಯವನ್ನು ಮಾಡಿಸಿರುತ್ತಾರೆ. ಆರೋಪಿಯೊಂದಿಗೆ ವ್ಯವಹಾರ ಮಾಡುವ ಮೊದಲು ಕೊಟೇಶನನ್ನು ತೆಗೆದುಕೊಂಡಿರುವುದಿಲ್ಲ.

ಆರೋಪಿತನದು ಯಾವುದೇ ಆಯಿಲ ವ್ಯಾಪಾರ ಇಲ್ಲ ಮತ್ತು ಅವರು ಪ್ರಿಂಟಿಂಗ ಪ್ರೆಸ ವ್ಯವಹಾರದಲ್ಲಿ ತೊಡಗಿದ್ದರಿಂದ ಯಾವುದೇ ಕೊಟೇಶನ ನೀಡಿಲ್ಲ ಎಂದರೆ ಸರಿಯಲ್ಲ.

ಆರೋಪಿತನಿಗೆ ರೂ.6,50,000/-ಗಳನ್ನು ಹಣದ ಮೂಲಕ ನೀಡಿರುತ್ತೇನೆ. ಆರೋಪಿತನು ರೂ.6,50,000/-ಗಳನ್ನು ತೆಗೆದುಕೊಂಡಿರುವುದಕ್ಕೆ ಯಾವುದೇ ರಶೀದಿಯನ್ನು ನೀಡಿರುವುದಿಲ್ಲ ಆದರೆ ಚಕ್ ಮತ್ತು ಬಾಂಡನ್ನು ನೀಡಿರುತ್ತಾರೆ. ಸಾಮಾನ್ಯವಾಗಿ ನಾನು ವ್ಯವಹಾರ ಮಾಡುವಾಗ ನಾನು ಚಕ್ ಮತ್ತು ಬಾಂಡನ್ನು ತೆಗೆದುಕೊಳ್ಳುವುದಿಲ್ಲ ಆದರೆ ಆರೋಪಿತನೇ ಭದ್ರತೆಗಾಗಿ ನೀಡಿರುತ್ತಾನೆ. ನಾನು ಆರೋಪಿತನಿಗೆ ರೂ.6,50,000/-ಗಳನ್ನು ದಿಃ 27-08-2016 ರಂದು ನೀಡಿರುತ್ತೇನೆ, ಮುಂದುವರೆದು ಸಾಕ್ಷಿಯು ದಿಃ 27-06-2016 ಎಂದು ನುಡಿದಿರುತ್ತಾರೆ. ನನ್ನ ಅಕೌಂಟ ಗೋಕಾಕಿನ ಕೆನರಾ ಬ್ಯಾಂಕಿನಲ್ಲಿ ಇದೆ.

2016 ರಲ್ಲಿ ಚಕ್ ಕ್ಲಿಯರಿಂಗ್ ಸೌಲಭ್ಯ ಇಲ್ಲದ ಕಾರಣ ನನಗೆ ಬೆಳಗಾವಿಯ ಖಡೇ ಬಜಾರ ಶಾಖೆಗೆ ಹೋಗುವಂತೆ ಹೇಳಿರುತ್ತಾರೆ. ನಿಪಿ 2 ರಿಟರ್ನ ಮೆಮೋ ಗೋಕಾಕಿನ ಕೆನರಾ ಬ್ಯಾಂಕನದ್ದಾಗಿರುತ್ತದೆ ಎಂದರೆ ಸರಿ.

ನಿಪಿ 6 ಬಾಂಡಿನ ನಿಖರವಾದ ದಿನಾಂಕ ಗೊತ್ತಿಲ್ಲ. ಆದರೆ ಆರೋಪಿತನು ಗೋಕಾಕ ತಹಶೀಲ್ದಾರರವರ ಕಚೇರಿಯ ಮುಂದೆ ಬರೆಸಿ ನೀಡಿರುತ್ತಾನೆ. ಆರೋಪಿತನು ಸಾಕ್ಷಿಗಳ ಸಹಿ ಮಾಡಿಸಿ ನೀರುತ್ತಾನೆ. ಬಾಂಡಿಗೆ ನನ್ನ ಪರವಾಗಿ ಯಾವುದೇ ಸಾಕ್ಷಿಗಳು ಇರುವುದಿಲ್ಲ. ಬಾಂಡನು ದಿಃ 14-05-2016 ನನಗೆ ಬರೆದುಕೊಟ್ಟಿರುತ್ತಾರೆ. ಬಾಂಡನ್ನು ಎಲ್ಲಿ ಖರೀದಿಸಿದ್ದಾರೆ ಎಂದರೆ ಆರೋಪಿತನು ಖರೀದಿಸಿರುತ್ತಾನೆ.

ಬಾಂಡಿನ ಫಸ್ಟ ಮತ್ತು ಸೆಕೆಂಡ ಪಾರ್ಟಿ ಯಾರಿದ್ದಾರೆ ಎಂದರೆ ನನಗೆ ಇಂಗ್ಲೀಷ ಅಷ್ಟಾಗಿ ಬರುವುದಿಲ್ಲ. ಬಾಂಡ ಖರೀದಿಸುವ ಸಮಯದಲ್ಲಿ ಬಾಂಡಿನ ಮೇಲೆ ನನ್ನ ಹೆಸರು ಇಲ್ಲ ಎಂದರೆ ನಾನು ಅದನ್ನು ನೋಡಿಲ್ಲ. ಸಾಮಾನ್ಯವಾಗಿ ಬಾಂಡನ್ನು ಬರೆಸಿಕೊಳ್ಳುವ ಸಮಯದಲ್ಲಿ ಎಲ್ಲ ವಿಚಾರಗಳನ್ನು ನೋಡಿ ಬರೆಸಿಕೊಳ್ಳುತ್ತಾರೆ ಎಂದರೆ ಆರೋಪಿತನು ಬರೆದುಕೊಟ್ಟಿದ್ದನ್ನು ನನ್ನ ಹತ್ತಿರ ಇಟ್ಟುಕೊಂಡಿರುತ್ತೇನೆ. ಬಾಂಡಿನ್ನು ಒಪ್ಪಿಗೆ ಪತ್ರ ಎಂದು ಬರೆಸಿಕೊಂಡಿರುತ್ತೇವೆ ಎಂದರೆ ಸರಿ.

ನಿಪಿ 6 ಬಾಂಡಿನ ಮೇಲೆ ಎರಡನೇ ಪಾರ್ಟಿಯ ಹೆಸರು ಮುರುಸಿದ್ದಪ್ಪ ಹಾರೂಗೇರಿ ಎಂದು ಇದೆ ಎಂದರೆ ನಾನು ಅದನ್ನು ನೋಡಿಲ್ಲ. ನನ್ನ ದೂರಿನಲ್ಲಿ ಆರೋಪಿನು ಚಕ್ಕ ಮತ್ತು ಬಾಂಡನ್ನು ನೀಡಿದನು ಎಂದು ಇಂಗ್ಲೀಷನಲ್ಲಿ ಬರೆಸಿದ್ದೇನೆ ಎಂದರೆ ಸರಿ. ಮುರುಸಿದ್ದಪ್ಪ ಹಾರೂಗೇರಿಯವರಿಗೆ ನೀಡಿದ ಬಾಂಡ ನನ್ನ ಹತ್ತಿರ ಹೇಗೆ ಬಂತು ಎಂದರೆ ಆರೋಪಿತನು ನನಗೆ ನೀಡಿರುತ್ತಾನೆ.

ನಾನು 2016 ರ ಕ್ಕಿಂತ ಮುಂಚೆ ಆರೋಪಿಯೊಂದಿಗೆ ಯಾವುದೇ ವ್ಯವಹಾರ ಮಾಡಿಲ್ಲ. ನಿಪಿ6 ಬಾಂಡನ್ನು ಖರೀದಿಸಿದ ದಿನಾಂಕ ಯಾವುದು ಎಂದರೆ ದಿಃ14-05-2014. ಸದರಿ ಬಾಂಡನಲ್ಲಿ ಹ್ಯಾಂಡಲೋನ ಎಂದು ಇದೆ ಎಂದರೆ ಸರಿ. ಒಪ್ಪಿಗೆ ಪತ್ರದ ವಿವರಣೆಯಲ್ಲಿ ಹ್ಯಾಂಡಲೋನ ಬಗ್ಗೆ ವಿವರಿಸಿಲ್ಲ

ಎಂದರೆ ಸರಿ. ನಿಪಿ 6 ಬಾಂಡಿನಲ್ಲಿ ಚಕ್ ನಂಬರ ಇರುತ್ತದೆ. ದಿಃ 14-05-2014 ರಿಂದ 14-05-2016 ವರೆಗೂ ನನ್ನ ವಶದಲ್ಲಿ ಖಾಲಿ ಹಾಳಿಯಾಗಿತ್ತು ಮತ್ತು ನಾನು ಅದನ್ನು ಬರೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನಗೂ ಮತ್ತು ನಿಪಿ 6 ಕ್ಕೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿಪಿ1 ಖಾಲಿ ಚಕ್‌ನ್ನು ಮುರುಸಿದ್ದಪ್ಪ ಅವರಿಗೆ ನೀಡಿಲಾಗಿತ್ತು ಎಂದರೆ ಸರಿಯಲ್ಲ.

ನಿಪಿ1 ರ ಮೇಲೆ ಆರೋಪಿತನ ಸಹಿಯ ಇಂಕು ಮತ್ತು ಅಕ್ಷರಗಳ ಇಂಕು ಬೇರೆ ಬೇರೆಎಂದರೆ ಸರಿ. ಸಾಕ್ಷಿ ಮುಂದುವರೆದು ಬರೆಯುವಾಗ ಇಂಕ ಖಾಲಿಯಾಗಿದ್ದರಿಂದ ಬೇರೆ ಪೆನ್ನಿನ ಮೂಲಕ ಬರೆದಿರುತ್ತಾರೆ.

ಆರೋಪಿನು ನನಗೆ ಯಾವುದೇ ಚಕ್ ಮತ್ತು ಬಾಂಡನ್ನು ನೀಡಿಲ್ಲ ಮತ್ತು ನಾನು ಸುಳ್ಳು ಕೇಸನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ಮುರುಸಿದ್ದಪ್ಪ ಹಾರೂಗೇರಿ ಇವರು ನಮ್ಮ ಪಿಎಫ ಕನ್ಸಲಟೆಂಟ ಆಗಿರುತ್ತಾರೆ. ಅವರು ವಕೀಲರಾಗಿರುತ್ತಾರೆ. ವಕೀಲರಿಗೆ ಕೈಗಡ ಸಾಲವನ್ನು ನೀಡಲು ಬರುವುದಿಲ್ಲ ಎಂದು ನನಗೆ ಬಾಂಡ ಮತ್ತು ಚಕ್‌ನ್ನುನೀಡಿ ನನ್ನ ಮುಖಾಂತರ ಕೇಸನ್ನು ದಾಖಲಿಸಿದ್ದಾರೆ ಎಂದರೆ ಸರಿಯಲ್ಲ.

ನಾನು ಆರೋಪಿತನು ಕೆಲಸ ಮಾಡವ ಸ್ಥಳವಾದ ಹುಬ್ಬಳ್ಳಿಗೆ ಹೋಗಿರುವುದಿಲ್ಲ. ಆದರೆ ಆರೋಪಿತನೇ ಗೋಕಾಕಗೆ ಬರುತ್ತಿದ್ದನು. ಆರೋಪಿತನು ಚಕ್ ಮತ್ತು ಬಾಂಡನು ಗೋಕಾಕಿನಲ್ಲಿ ನೀಡಿರುತ್ತಾನೆ. ವ್ಯವಹಾರದ ದಿಃ 27-06-2016 ಆಗಿರುತ್ತದೆ. ಬಾಂಡನು ದಿಃ 14-05-2016 ರಂದು ನೀಡಿರುತ್ತಾರೆ. ನಾನು ಮೊತ್ತವನ್ನು ನೀಡುವುದಕ್ಕಿಂತ ಮೊದಲೆ ಆರೋಪಿತನು ಬಾಂಡನ್ನು ನೀಡಿದ್ದನು ಎಂದರೆ ಸರಿ. ನಾನು ಕಾಂಟ್ರ್ಯಾಕ್ಟ ಕೆಲಸ ಮಾಡುವುದನ್ನು ತೋರಿಸಿಸುವುದಕ್ಕಾಗಿ ಯಾವುದೇ ದಾಖಲೆಗಳನ್ನು ಹಾಜರ ಪಡಿಸಿಲ್ಲ. 2016 ರಲ್ಲಿ ನನ್ನ ಸಿ.ಎಸ್.ಟಿ ನಂ. ಇರುತ್ತದೆ.

ಆರೋಪಿತನಿಗೆ ತೊಂದರೆ ಕೊಡುವ ಉದ್ದೇಶದಿಂದ ಹಾರೂಗೇರಿ ಇವರು ಸುಳ್ಳು ಕೇಸನ್ನು ನನ್ನ ಮೂಲಕ ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ಆರೋಪಿತನೊಂದಿಗೆ 3-4 ಬಾರಿ ವ್ಯವಹಾರ ಮಾಡಿದ್ದಕ್ಕಾಗಿ ಯಾವುದೇ ಬಿಲ್ಲನ್ನು ಹಾಜರ ಪಡಿಸಿಲ್ಲ. ನನಗೂ ಮತ್ತು ಆರೋಪಿತನೊಂದಿಗೆ ಯಾವುದೇ ವ್ಯವಹಾರ

ಆಗಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಹಾರೂಗೇರಿ ಸೇರಿ ಸುಳ್ಳು ಕಾಗದ ಪತ್ರ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲಃ

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ವೀರೇಶ ಕುಮಾರ ಸಿ. ಕೆ.)
ಪ್ರ.ದಿ.&ನ್ಯಾದಂ., ಗೋಕಾಕ.